ಕುತೂಹಲಕಾರಿ ಅಂಶವೆಂದರೆ ಆಗ ಗೋಕರ್ಣದಲ್ಲಿ ವಿದೇಶಿ ಯಾತ್ರಾರ್ಥಿಗಳ ಸುಳಿವೇ ಇರಲಿಲ್ಲ. ಆದರೂ ಭವಿಷ್ಯದ ಹೊಳಹಿನಂತೆ, ಈ 'ಲೇಡಿ'ಯ ಸ್ವರೂಪವಿತ್ತಲ್ಲ ಅಂತ ಈಗ ಕೌತುಕ ಅನಿಸುತ್ತದೆ. ಏಕೆಂದರೆ, ಆ 'ಲೇಡಿ' ಮಾತಾಡುವುದು ಇಂಗ್ಲಿಷಿನಲ್ಲೇ ಇತ್ತು. 'ಗುಡ್‌ಮಾರ್ನಿಂಗ್, ಹೌ ಡು ಯು ಡು, ಟಾಟಾ, ಬೈಬೈ' – ಎಂದಾಕೆ ಎಲ್ಲರತ್ತ ಕೈಬೀಸಿ ಒಂದು ಕೈಲಿ ಸಿಗರೇಟನ್ನೂ ಸೇದುತ್ತ ಚಿಮ್ಮುತ್ತ ನಡೆದರೆ ವೀಕ್ಷಕರಿಗೆ ಅದರಲ್ಲೂ ಹೆಂಗಳೆಯರಿಗೇ ಭಯಂಕರ ಸಂಭ್ರಮವಾಗುತ್ತಿತ್ತು. ಕೇಕೆ ಹಾಕಿ ಖುಷಿ ಪಡುತ್ತಿದ್ದರು. ಈ ನಡುವೆ ನಿಜವಾದ ಹಾವನ್ನು ಕೊರಳಿಗೆ ಸುತ್ತಿಕೊಂಡ ನೀಲಿಮುಖದ ಈಶ್ವರರೂ ಸುತ್ತಾಡುತ್ತಿದ್ದರು. ಚಕ್ಕಡಿಯಲ್ಲಿ, ಟೇಲರ್ ಆಗಿದ್ದವನು, ಕಿವಿಗೆ ಪೆನ್ಸಿಲ್ ಸಿಕ್ಕಿಸಿಕೊಂಡು, ಕೈಲಿ ಟೇಪು ಹಿಡಿದು ಗಿರಾಕಿಗಳ ವೇಷ ಹಾಕಿದವರ ಸೊಂಟದ ಮಾಪು ಹಿಡಿಯುವ ನೆಪದಲ್ಲಿ ಅವರಿಗೆ ಕಚಗುಳಿ ಮಾಡಿ ಅವರನ್ನೂ ವೀಕ್ಷಕರನ್ನೂ ನಗಿಸುತ್ತಿದ್ದನು. ಸ್ತ್ರೀ ಗಿರಾಕಿಯ ಪಾತ್ರಕ್ಕಂತೂ ಕುಬುಸದ ಮಾಪಿನ ನೆಪದಲ್ಲಿ ಕಂಕುಳಿಗೆಲ್ಲ ಕಚಗುಳಿ ಮಾಡಿ ಜನರಿಗೆ ರಂಜನೆಯ ರಸದೌತಣವನ್ನು ಈಯುತ್ತಿದ್ದನು. ಹೀಗೆ ದೈನಿಕದಲ್ಲಿ ನೋಡಿದ್ದ, ಆದರೆ ಎಟುಕದ, ನಿಲುಕದ ಪಾತ್ರಗಳನ್ನು ಅಭಿನಯಿಸುತ್ತಲೇ ಅವುಗಳನ್ನು ಹಂಗಿಸುತ್ತಲೇ ಆದರಾಚೆ ಹೋಗುವ ನೆಗೆತ ಇದು. ವಿದೇಶಗಳಲ್ಲಿ ನಡೆಯುವ ಹ್ಯಾಲೋವೀನ್ (halloween) ಮೆರವಣಿಗೆ, ಆಶಯದಲ್ಲಿ ಬೇರೆ ಇದ್ದರೂ ಸಮುದಾಯದ ಪಾಲ್ಗೊಳ್ಳುವಿಕೆ ಮತ್ತು ಛದ್ಮವೇಷದ ಆಕೃತಿಯಲ್ಲಿ ನಮ್ಮ ಹಗರಣಕ್ಕಿಂತ ಭಿನ್ನವಿಲ್ಲ.



ಶಾಲೆ, ಕಾಲೇಜುಗಳ ವಿದ್ಯಾರ್ಥಿಗಳ ವಾರ್ಷಿಕೋತ್ಸವದ ಛದ್ಮವೇಷಗಳೂ ಆಯಾ ಊರಿನ, ಪರಿಸರದ ಪ್ರತಿಫಲನಗಳೇ ಆಗಿರುತ್ತಿದ್ದವು. ರೈತ, ವ್ಯಾಪಾರಿ, ಬಳೆಗಾರ, ರೈಲ್ವೇ ಕೂಲಿ, ಮೀನುಗಾರ್ತಿ, ಡಾಕ್ಟರ್, ಕೈಲಿ ಬೆತ್ತ ಹಿಡಿದ ಟೀಚರ್ – ಹೀಗೆ. ನೋಡಿದ ಸಿನಿಮಾ, ನಾಟಕ, ಟೆಲಿವಿಜನ್‌ಗಳ ಮೂಲಕ ಪರಿಚಿತವಾದ ಸಂಗತಿಗಳೂ ಬರತೊಡಗಿದವು. ಒನಕೆ ಓಬವ್ವ, ಕಿತ್ತೂರ ಚೆನ್ನಮ್ಮ, ಕ್ಯಾಲೆಂಡರಿನಿಂದಲೇ ಹುಬೇಹೂಬು ಇಳಿದು ಬಂದಂತಿದ್ದ, ಕೈಗೆ ಮುಡಿಗೆ ಮಲ್ಲಿಗೆ ಮಾಲೆ ಕಟ್ಟಿಕೊಂಡ ಶ್ವೇತಾಂಬರಿ ಶಕುಂತಲೆ, ಮುಂಡಾಸು ಸಂಭಾಳಿಸುವಲ್ಲೇ ಕಂಗಾಲಾಗಿ ನಿರತನಾದ ಪುಟಾಣಿ ಸಂಗೊಳ್ಳಿ ರಾಯಣ್ಣ, ಕೋಟು ಹಾಕಿದ ಕುವೆಂಪು, ಕೊಡೆ ಹಿಡಿದ ಬೇಂದ್ರೆ, ಮುಖದ ಎದುರು ಟಿವಿಯಂಥ ಚೌಕತೂತಿನ ರಟ್ಟು ಹಿಡಿದುಕೊಂಡು ಬಂದು ನಿಂತು ವಟವಟಗುಡುವ ವಾರ್ತಾವಾಚಕಿ, ರಟ್ಟಿನ ಮರದಲ್ಲಿ ಮುಖ ತೂರಿಸಿ, 'ನಾನು ಮರ ನಿಮಗೆ ಪ್ರಾಣವಾಯು ಕೊಡುತ್ತೇನೆ. ದಯವಿಟ್ಟು ನನ್ನ ಕಡಿಯಬೇಡಿ' ಎನ್ನುವ ವನದೇವಿ... ಹೀಗೆ. ಎಲ್ಲರೂ ಚಪ್ಪಾಳೆ ತಟ್ಟುವಾಗ ಪಾಲಕರು ಅತ್ತ ವೇಷಧಾರಿ ಮಕ್ಕಳನ್ನೂ ನೋಡದೆ ಇತ್ತ ಪ್ರೇಕ್ಷಕರನ್ನೂ ನೋಡದೆ ತೀರ್ಪುಗಾರರ ಮುಖವನ್ನೇ ನೋಡುವರು.

ಸುಮಾರು ಎಂಬತ್ತರ ದಶಕದಲ್ಲಿ ಮುಂಬಯಿಯ ಒಂದು ಶಾಲೆಯಲ್ಲಿ ನಡೆದ ಛದ್ಮವೇಷ ಸ್ಪರ್ಧೆಯ ಒಂದು ವೇಷ ಸೂಕ್ಷ್ಮ ವಿವಾದವನ್ನೇ ಸೃಷ್ಟಿಸಿತು. ಶಿವಾಜಿ ಮಹಾರಾಜ, ಚಾರ್ಲಿ ಚಾಪ್ಲಿನ್, ಟ್ರಾಫಿಕ್ ಪೊಲೀಸ್, ಕರಮ್‌ಚಂದ್, ಪಾನ್‌ವಾಲಾ – ಇವರೆಲ್ಲರ ನಡುವೆ ಪುಟ್ಟ ಸೀರೆ ಉಟ್ಟು, ಮಂಗಳ ಸೂತ್ರ ತೊಟ್ಟು, ಬಾಸಿಂಗ ಕಟ್ಟಿಕೊಂಡು ಬಂದ ಎಳೆ ಮದುವಣಗಿತ್ತಿ ಎಲ್ಲರನ್ನು ಸದ್ದಿಲ್ಲದೆ ಕಲಕಿಬಿಟ್ಟಳು. ಏಕೆಂದರೆ, ಅವಳು ಒಂದು ಕೈಲಿ 'ವರದಕ್ಷಿಣೆ' ಎಂದು ಬರೆದಿದ್ದ ಸೀಮೆ ಎಣ್ಣೆ ಕ್ಯಾನನ್ನು ಹಿಡಿದುಕೊಂಡು ಬಂದು ನಿಂತಿದ್ದಳು – ಒಂದೂ ಮಾತನ್ನೂ ಆಡದೆ! ಯಾವ ವ್ಯಾಖ್ಯಾನ ವಿವರಣೆಯ ಹಂಗಿಲ್ಲದೆ ದಾರುಣ ವಾಸ್ತವದ ಎಳೆಯೊಂದನ್ನು ಜಗ್ಗಿ ಬಿಟ್ಟ ಆ ಎಳೆ ಮದುಮಗಳಿಗೆ ಮೊದಲ ಬಹುಮಾನ ಬಂತು. ಆದರೆ, ಅನಂತರ, ಅಳವನ್ನು ಮೀರಿದ ದಾರುಣತೆಯನ್ನು ಮಕ್ಕಳಲ್ಲಿ ಈಗಲೇ ಬಿತ್ತುವುದು ಸರಿಯೆ? ಅದು ವಯಸ್ಕರ, ಪಾಲಕರ ನಿಲುವಾಗಲಿಲ್ಲವೆ? – ಹೀಗೆಲ್ಲ ಪ್ರಶ್ನೆ ಬಂದವು. ಅದಕ್ಕೆ ಮಕ್ಕಳು ಟಿವಿ ಸೀರಿಯಲ್ಲು, ಸಿನಿಮಾ ನೋಡುವುದಿಲ್ಲವೆ, ಅವರ ಗ್ರಹಿಕೆಗೆ ಅದು